ಇ) *ಹಾಲಿ ನಡೆಯುತ್ತಿರುವ ಬಾಡಿಗೆ ಕಟ್ಟಡವು ಬಹಳ ಹೀನಸ್ಥಿತಿಯಲ್ಲಿರುವುದು ನಿಜವಲ್ಲವೆ?*

ಈ) *ಕೋಲಾರ ಜಿಲ್ಲೆಯ ಬಂಗಾರಪೇಟೆ ಪ್ರಥಮ ದರ್ಜೆ ಕಾಲೇಜಿಗೆ ಹೊಸ ಕಟ್ಟಡ ನಿರ್ಮಿಸುವ ಬಗ್ಗೆ ಸರ್ಕಾರವು ಯಾವುದಾದರೂ ಕ್ರಮ ತೆಗೆದುಕೊಂಡಿದೆಯೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹೌದು.

ಆ) ಲೋಕೋಪಯೋಗಿ ಇಲಾಖೆಯವರು ನಿಗದಿ ಪಡಿಸಿರುವ ಪ್ರಕಾರ ತಿಂಗಳು ರೂ.900-00ಗಳನ್ನು ಬಾಡಿಗೆಯಾಗಿ ಪಾವತಿ ಮಾಡಲಾಗುತ್ತಿದೆ.

ಇ) ಹಾಲಿ ನಡೆಸುತ್ತಿರುವ ಕಟ್ಟಡವು ಹೀನಸ್ಥಿತಿಯಲ್ಲಿದೆ ಎಂದು ಪ್ರಾಂಶುಪಾಲರಿಂದಾಗಲಿ ಅಥವಾ ಲೋಕೋಪಯೋಗಿ ಇಲಾಖೆಯವರಿಂದಾಗಲಿ ವಿಷಯ ತಿಳಿದು ಬಂದಿರುವುದಿಲ್ಲ ಮತ್ತು ಸರ್ಕಾರದ ಗಮನಕ್ಕೆ ಬಂದಿರುವುದಲ್ಲ.

ಈ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡಕ್ಕಾಗಿ 1991-92ನೇ ಸಾಲಿನ ಯೋಜನೆಯಡಿಯಲ್ಲಿ ಒದಗಿಸಿದ ಹಣ ರೂ. 150-00 ಲಕ್ಷಗಳು ಮಾತ್ರ. 64 ಸರ್ಕಾರಿ ಕಾಲೇಜುಗಳಿಗೆ ಸ್ವಂತ ಕಟ್ಟಡ ಒದಗಿಸುವ ಅವಶ್ಯಕತೆ ಇದೆ. ಆದುದರಿಂದ ನಿರ್ಮಾಣ ಕಾರ್ಯವನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು. 1991-92ನೇ ಸಾಲಿನಲ್ಲಿ 12 ಹೊಸ ಕಾಮಗಾರಿಗಳನ್ನು ಮಾತ್ರ ಪರಿಗಣಿಸಲು ಸಾಧ್ಯವಾಯಿತು.

ಆದಾಗ್ಯೂ ಈ ಕಾರ್ಯವನ್ನು 1992-93ನೇ ಸಾಲಿನಲ್ಲಿ ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಪರಿಶೀಲಿಸಲಾಗುವುದು.

ವಿಶ್ವವಿದ್ಯಾಲಯಗಳ ಸಾರಣೀಕೃತ ವ್ಯವಸ್ಥೆಯನ್ನು ಗಣಕೀಕರಣ ಗೊಳಿಸುವ ಬಗ್ಗೆ.

ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾಲಯಗಳ ಸಾರಣೀಕರಣ ವ್ಯವಸ್ಥೆಯನ್ನು ಗಣಕೀಕರಣಗೊಳಿಸಲು ಸರ್ಕಾರ ತೀರ್ಮಾನ ಕೈಗೊಂಡಿದೆಯೇ?*

ಆ) *ಏಾಗಿದ್ದಲ್ಲಿ ಸಾರಣೀಕೃತ ವ್ಯವಸ್ಥೆಯನ್ನು ಗಣಕೀಕರಣಗೊಳಿಸಲು ಯಾವ ಯಾವ ವಿಶ್ವವಿದ್ಯಾಲಯಗಳನ್ನು ಆಯ್ಕೆ ಮಾಡಲಾಗಿದೆ?*

ಇ) *ಮೈಸೂರು, ಬೆಂಗಳೂರು, ಗುಲ್ಬರ್ಗಾ ಮತ್ತು ಸಹ್ಯಾದ್ರಿ ವಿಶ್ವವಿದ್ಯಾಲಯಗಳ ಸಾರಣೀಕರಣವನ್ನು ಗಣಕೀಕೃತಗೊಳಿಸಲು ಎಷ್ಟು ಮೊತ್ತ ಅಗತ್ಯವಾಗಿದೆ?*

ಈ) *ಅಕ್ರಮಗಳನ್ನು ತಡೆಗಟ್ಟಲು ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾಲಯಗಳ ಸಾರಣೀಕರಣವನ್ನು ಕಣಕೀಕೃತಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ, ಆದರೆ. ಬೆಂಗಳೂರು ವಿಶ್ವವಿದ್ಯಾಲಯವು ಮಾತ್ರ ಈ ವಿಷಯದ ಬಗ್ಗೆ ಪ್ರಸ್ತಾವನೆ ಕಳುಹಿಸಿದೆ.

ಇ) ಮೈಸೂರು-ಪ್ರಸ್ತಾವನೆ ಇಲ್ಲ.

ಬೆಂಗಳೂರು-80 ಲಕ್ಷ ರೂ.

ಗುಲ್ಬರ್ಗಾ-75 ಲಕ್ಷ ರೂ.

ಸಹ್ಯಾದ್ರಿ (ಕುವೆಂಪು)-ಪ್ರಸ್ತಾವನೆ ಇಲ್ಲ.

ಈ) ವಿಶ್ವವಿದ್ಯಾಲಯಗಳಿಂದ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

ಹಾಸನದಲ್ಲಿ ಪಾಮೋಲಿನ್ ಎಣ್ಣೆ ಸ್ಯಾಚೆಟ್ ಸ್ಥಾಪನೆ ಕುರಿತು

2683 - ಶ್ರೀ ಕೆ. ಲಕ್ಕಪ್ಪ, (ಕುಣಿಗಲ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಬೆಂಗಳೂರು ಮತ್ತು ಹಾಸನದಲ್ಲಿ ಪಾಮೋಲಿನ್ ಎಣ್ಣೆ ಸ್ಯಾಚೆಟ್ ಷಟರ್‌ಗಳನ್ನು ಸ್ಥಾಪಿಸಿದೆಯೇ?

ಆ) ಹಾಗಿದ್ದಲ್ಲಿ, ಈ ಮೇಲಿನ ಘಟಕಗಳನ್ನು ಸ್ಥಾಪಿಸಲು ಖರ್ಚು ಮಾಡಿದ ಹಣವೆಷ್ಟು?

ಇ) ಈ ಘಟಕಗಳು ಕಾರ್ಯನಿರ್ವಹಿಸುತ್ತಿದೆಯೇ?

ಈ) ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಉ) ಈ ಘಟಕಗಳನ್ನು ಮಾರುವ ಅಥವಾ ಗುತ್ತಿಗೆಗೆ ಖಾಸಗಿ ಕಂಪನಿಗಳಿಗೆ ಕೊಡುವ ಪ್ರಕರಣ ವಿದೆಯೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಹೌದು.

ಆ) ಬೆಂಗಳೂರು - ರೂ.83.52 ಲಕ್ಷಗಳು.

ಸ್ಯಾಚೆಟ್ ಘಟಕ (1000 ಎಂ.ಟಿ.ಯ ಶೇಖರಣಾ ಸಾಮರ್ಥ್ಯದ ಟ್ಯಾಂಕನ್ನು ಸೇರಿ)

ಹಾಸನ ಸ್ಯಾಚೆಟ್ ಘಟಕ - ರೂ. 29.57 ಲಕ್ಷಗಳು.

ಇ) ಬೆಂಗಳೂರು ಘಟಕ ಕಾರ್ಯನಿರ್ವಹಿಸುತ್ತಿದೆ. ಕೇಂದ್ರದಿಂದ ಪಾಮೋಲಿನ್ ಹಂಚಿಕೆಯಾಗದ್ದರಿಂದ ಹಾಸನ ಘಟಕದ ಕಾರ್ಯ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಆದರೂ ಕರ್ನಾಟಕ ತೈಲ ಮಹಾನಿಗಮ ಕರ್ನಾಟಕ ಸಹಕಾರ ಗ್ರಾಹಕರ ಮಹಾನಿಗಮ ಕರ್ನಾಟಕ ಕೃಷಿ ಪ್ರೋಟೀಸ್ ಲಿಮಿಟೆಡ್. ಇವರಿಂದ ಎಣ್ಣೆಯನ್ನು ಪಡೆದು ಈ ಘಟಕವನ್ನು ಕಾರ್ಯೋನ್ಮುಖಗೊಳಿಸುವ ಪ್ರಯತ್ನ ಮಾಡಲಾಗುತ್ತಿದೆ.

ಈ) ಇಲ್ಲ.